ಓ ಎಸ ನಂ.53/2023
ಪಿ.ಡಬ್ಲ್ಯೂ-1 ರಮೇಶ ತಂದೆ ಸಾಲಿಂಗಪ್ಪ

**(ಇಂದು ದಿನಾಂಕಃ 15-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಎಸ್ ಪಿ ವಕೀಲರಿಂದ.

ದಾವಾ ಆಸ್ತಿಗಳು ನಮ್ಮ ಹಿರಿಯರಿಂದ ಬಂದಿರುತ್ತವೆ. ನಮ್ಮ ತಾತನವರಿಗೆ ಎಷ್ಟು ಜನ ಅಣ್ಣತಮ್ಮಂದಿರು ನನಗೆ ಗೊತ್ತಿಲ್ಲ. ನಮ್ಮ ತಾತ ದೇವರಾವ್ ರವರಿಗೆ ಒಟ್ಟು 8 ಜನ ಮಕ್ಕಳು ಇರುತ್ತಾರೆ. ದೇವರಾವ್ ರವರಿಗೆ ಸಾತಲಿಂಗಪ್ಪ, ಸಿದ್ದರಾಮ, ಮಲ್ಲಿಕಾರ್ಜುನ, ಶಿವಶರಣಪ್ಪ, ಕಲ್ಯಾಣಿ, ಶಿವಲಿಂಗಪ್ಪ, ಶ್ರಿಶೈಲ ಮತ್ತು ಬಸವರಾಜ ಎಂಬ 8 ಜನ ಗಂಡು ಮಕ್ಕಳು ಮತ್ತು ಬಸಮ್ಮ, ಸಿದ್ದಮ್ಮ, ಗಂಗಮ್ಮ ಮತ್ತು ಇನ್ನೊಬ್ಬರು ಒಟ್ಟು 4 ಜನ ಹೆಣ್ಣುಮಕ್ಕಳು, ಮಕ್ಕಳು ಆಗಿರುತ್ತಾರೆ. ಆ ಇನ್ನೊಬ್ಬರ ಹೆಸರು ನನಗೆ ಹೇಳಲು ನೆನಪಿಲ್ಲ. ನಮ್ಮ ತಾತನವರಿಗೆ ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ಸಾತಲಿಂಗಪ್ಪ ಮತ್ತು ಅವರ ಸಹೋದರರು ಯಾವ ವರ್ಷದಲ್ಲಿ ಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ತಾತನಿಂದ ನಮ್ಮ ತಂದೆಯವರ ಹೆಸರಿನಲ್ಲಿ ಯಾವ ವರ್ಷದಲ್ಲಿ ಮುಟೇಷನ ಆಗಿದೆ ನಾನು ನೋಡಿಲ್ಲ.

2. ನಾನು ಖಾಸಗಿ ಕೆಲಸ ಮಾಡುತ್ತೇನೆ. 2ನೇ ಪ್ರತಿವಾದಿ ಶಿಕ್ಷಕರಾಗಿರುತ್ತಾರೆ. 3ನೇ ಪ್ರತಿವಾದಿ ಒಕ್ಕಲುತನ ಮಾಡುತ್ತಾರೆ. 3ನೇ ಪ್ರತಿವಾದಿ ಊರಿನಲ್ಲಿ ಇರುತ್ತಾರೆ. 3ನೇ ಪ್ರತಿವಾದಿ ಕಲಬುರಗಿಯಲ್ಲಿ ವಾಸವಾಗಿರುವ ಕುರಿತು ನಾನು ವಾದಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿ. 4ನೇ ಪ್ರತಿವಾದಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೆಲಸ

ಮಾಡುತ್ತಾರೆ. 6ನೇ ಪ್ರತಿವಾದಿರವರು ವ್ಯಾಪಾರ ಮಾಡುತ್ತಾರೆ. 5ನೇ ಪ್ರತಿವಾದಿ ನನ್ನ ಸಹೋದರಿ ಆಗಿರುತ್ತಾರೆ. 1997 ರಲ್ಲಿ 5ನೇ ಪ್ರತಿವಾದಿಯ ಮದುವೆಯಾಗಿರುತ್ತದೆ.

3. ಸರ್ವೆ ನಂ.117 ಆಸ್ತಿ ನನ್ನ ಮತ್ತು 2 ಮತ್ತು 3ನೇ ಪ್ರತಿವಾದಿಯರ ಹೆಸರಿನಲ್ಲಿ ಇರುತ್ತದೆ. ನಮ್ಮ ತಂದೆಯವರು ಮಾಡಿದ್ದರಿಂದ 3 ಜನರ ಹೆಸರಿನಲ್ಲಿ ಸದರಿ ಆಸ್ತಿ ಇರುತ್ತದೆ. ಸುಮಾರು 35 ವರ್ಷಗಳ ಹಿಂದೆ ನಾನು ಅಪ್ರಾಪ್ತನಿದ್ದಾಗ ಆ ರೀತಿ ಹೆಸರಿನಲ್ಲಿ ಮಾಡಿರುತ್ತಾರೆ. ನಮ್ಮ ತಂದೆ ಹಲವಾರು ವರ್ಷಗಳ ಹಿಂದೆ ನಮಗೆ ಭಾಗ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ. ಪಾಲು ಮಾಡಿ ಕೊಟ್ಟಾಗಿನಿಂದ ನಾವು ಸದರಿ ಪಾಲಿನಂತೆ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಜಂಟಿಯಾಗಿ ಮಾಡುತ್ತಿದ್ದೇವೆ ಎನ್ನುತ್ತಾರೆ. ನಮ್ಮ ತಂದೆ ಸರ್ವೆ ನಂ.117 ನ್ನು 3 ಜನರಿಗೆ ನೀಡಿರುತ್ತಾರೆ. ಪರಮೇಶ್ವರ, ರಮೇಶ ಮತ್ತು ಸತೀಶರವರಿಗೆ ಸದರಿ ಸರ್ವೆ ನಂ.117 ನ್ನು ನೀಡಿರುತ್ತಾರೆ. ಸರ್ವೆನಂ.36 ರ 9 ಎಕರೆ 28 ಗುಂಟೆ ಜಮೀನನ್ನು 2 ಜನರಿಗೆ ನೀಡಿರುತ್ತಾರೆ. ಸುರೇಶ ಮತ್ತು ರವಿರವರಿಗೆ ಸದರಿ ಜಮೀನು ನೀಡಿರುತ್ತಾರೆ. ಸರ್ವೆ ನಂ.24/2 ರ 3 ಎಕರೆ 38 ಗುಂಟೆ ಜಮಿನು ನಮ್ಮ ತಂದೆಯ ಪಾಲಿಗೆ ಬಂದಿರುತ್ತದೆ. ಸಾಕ್ಷಿ ನಮ್ಮ ತಂದೆ ಕೇವಲ ಹೆಸರಿಗೆ ಮಾತ್ರ ನಮಗೆ ಮಾಹಿತಿ ಇಲ್ಲದೆ ಆ ರೀತಿ ಮಾಡಿರುತ್ತಾರೆ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಆದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.